ಕರ್ನಾಟಕ ಸರ್ಕಾರ

**ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ**

ವಾರ್ತಾ ಸೌಧ, ಸಂಖ್ಯೆ : 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಜಂ ನಿ : ಸುಮಪ : 2020–21 : ಜುಲೈ 30, 2020

# ಪತ್ರಿಕಾ ಪ್ರಕಟಣೆ

## ಬೆಂಗಳೂರು ಮೆಟ್ರೋ ಹಂತ–2

## ಕಂಟೋನ್ಮೆಂಟ್ ರೈಲ್ವೆ ನಿಲ್ದಾಣದಿಂದ ಮತ್ತು ಶಿವಾಜಿನಗರ ಮೆಟ್ರೋ ನಿಲ್ದಾಣಗಳ ನಡುವೆ ಸುರಂಗ ಮಾರ್ಗಕ್ಕೆ ಚಾಲನೆ

ಬೆಂಗಳೂರು, ಜುಲೈ 30 (ಕರ್ನಾಟಕ ವಾರ್ತೆ)

ಬೆಂಗಳೂರು ಮೆಟ್ರೋ ರೈಲು ನಿಗಮ ವತಿಯಿಂದ ಆಯೋಜಿಸಿದ್ದ ಮೆಟ್ರೋ –2 ಹಂತದ ಬೆಂಗಳೂರು ಕಂಟೋನ್ಮೆಂಟ್ ರೈಲ್ವೆ ನಿಲ್ದಾಣದಿಂದ ಮತ್ತು ಶಿವಾಜಿನಗರ ಮೆಟ್ರೋ ನಿಲ್ದಾಣಗಳ ನಡುವೆ ಸುರಂಗ ಮಾರ್ಗಕ್ಕೆ ಅಬ್ದುಲ್ ಬ್ಯಾರಿ ಹೈಸ್ಕೂಲ್ ಮೈದಾನ, ಸುಲ್ತಾನಾ ಗುಂಟಾ, ಶಿವಾಜಿನಗರದಲ್ಲಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಇಂದು ಚಾಲನೆ ನೀಡಿದರು.

ನಮ್ಮ ಮೆಟ್ರೋ ಬೆಂಗಳೂರಿನ ಸಂಚಾರ ದಟ್ಟಣೆಯನ್ನು ಕಡಿಮೆ ಮಾಡಲು ಹಾಗೂ ಕ್ಷಿಪ್ರಗತಿಯಲ್ಲಿ ಪ್ರಯಾಣಿಕರನ್ನು ತಮ್ಮ ಗಮ್ಯಕ್ಕೆ ತಲುಪಿಸುವ ನಿಟ್ಟಿನಲ್ಲಿ ಅತ್ಯುತ್ತಮ ಸೇವೆಯನ್ನು ಒದಗಿಸುತ್ತಿದೆ. ಮೆಟ್ರೋ ಹಂತ–2 ರ ಭಾಗವಾಗಿ ಗೊಟ್ಟಿಗೆರೆಯಿಂದ ನಾಗವಾರದವರೆಗೆ 21.40 ಕಿ.ಮೀ ಉದ್ದದ ಹೊಸ ಮಾರ್ಗದ ಕಾಮಗಾರಿ ಪ್ರಗತಿಯಲ್ಲಿದೆ. ಶಿವಾಜಿನಗರ ನಿಲ್ದಾಣದಿಂದ ಕಂಟೋನ್ಮೆಂಟ್ ರೈಲ್ವೆ ನಿಲ್ದಾಣದ ಕಡೆಗೆ ಸುರಂಗ ಮಾರ್ಗ 855 ಮೀಟರ್ ಉದ್ದವಿದೆ. ಸುರಂಗ ಮಾರ್ಗದ ಕಾಮಗಾರಿಯನ್ನು ಲಾರ್ಸನ್ ಮತ್ತು ಟ್ಯೂಬ್ರೋ ಲಿಮಿಟೆಡ್ ಸಂಸ್ಥೆಯವರಿಗೆ ವಹಿಸಲಾಗಿದೆ ಎಂದು ಹೇಳಿದರು.

ಸುರಂಗ ಕೊರೆಯುವ ಯಂತ್ರಗಳಿಗೆ ಊರ್ಜಾ ಮತ್ತು ವಿಂಧ್ಯಾ ಎಂದು ಹೆಸರಿಡಲಾಗಿದೆ. ಇವುಗಳ ಪುನರ್ ಜೋಡಣೆ ಕಾರ್ಯದ ನಂತರ ಸ್ಥಳ ಪರೀಕ್ಷೆ ಪೂರ್ಣಗೊಳಿಸಿ ಸುರಂಗ ಕೊರೆಯಲು ಸಿದ್ಧವಾಗಿದೆ. ಹೊಸ ಮಾರ್ಗದಲ್ಲಿ 7.5 ಕಿ.ಮೀ ಉದ್ದದ ಎಲಿವೇಟೆಡ್ ಕಾರಿಡಾರ್ ಇದ್ದು, ಆರು ಎಲಿವೇಟೆಡ್ ನಿಲ್ದಾಣಗಳನ್ನು ಹೊಂದಿದೆ. ಹಾಗೂ 12 ನೆಲದಡಿಯ ನಿಲ್ದಾಣಗಳು ಹಾಗೂ 10.37 ಕಿ.ಮೀ ಅವಳಿ ಸುರಂಗ ಮಾರ್ಗಗಳನ್ನು

ಹೊಂದಿದೆ. ಶೀಘ್ರ ನಿರ್ಮಾಣದ ಸಲುವಾಗಿ ಸುರಂಗ ಮಾರ್ಗ ಕಾಮಗಾರಿಗಳನ್ನು ನಾಲ್ಕು ಪ್ಯಾಕೇಜ್‌ಗಳನ್ನಾಗಿ ವಿಂಗಡಿಸಲಾಗಿದೆ. ಮೆಟ್ರೋ ಹಂತ–2 ರ ಯೋಜನೆಯ ಒಟ್ಟಾರೆ ನಿರ್ಮಾಣದ ವೆಚ್ಚ ರೂ. **30,695** ಕೋಟಿ ರೂ.ಗಳು ಎಂದರು.

ಸೆಂಟ್ರಲ್ ಸಿಲ್ಕ್‌ಬೋರ್ಡ್ ಜಂಕ್ಷನ್– ಕೆ.ಆರ್.ಪುರಂ – ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸಲಾಗುವುದು. ಕಾಮಗಾರಿಯ ವೆಚ್ಚ **9,934.58** ಕೋಟಿಗಳಾಗಿದ್ದು, ಯೋಜನೆಯ ವಿಸ್ತೃತ ಯೋಜನಾ ವರದಿಗೆ ಕೇಂದ್ರ ಸರ್ಕಾರದ ಅನುಮೋದನೆಯನ್ನು ನಿರೀಕ್ಷಿಸಿದೆ. ಮೆಟ್ರೋ – **2**ನೇ ಹಂತದ ಎಲ್ಲಾ ರೀಚ್‌ನ ಕಾಮಗಾರಿಗಳು ಪ್ರಾರಂಭವಾಗಿದ್ದು, **2024**ರ ವೇಳೆಗೆ ಪೂರ್ಣಗೊಳಿಸುವ ನಿರೀಕ್ಷೆಯಿದೆ. ಬೆಂಗಳೂರು ನಗರದ ಸಮಗ್ರ ಅಭಿವೃದ್ಧಿಗೆ ನಮ್ಮ ಸರ್ಕಾರ ಬದ್ಧವಾಗಿದೆ ಎಂದು ತಿಳಿಸಿದರು.

ಜಾಗತಿಕ ಮಟ್ಟದಲ್ಲಿ ವೇಗವಾಗಿ ಬೆಳೆಯುತ್ತಿರುವ ನಗರಗಳಲ್ಲಿ ನಮ್ಮ ಬೆಂಗಳೂರು ಗುರುತಿಸಿಕೊಂಡಿದೆ. ಈ ಮಾನ್ಯತೆಗೆ ತಕ್ಕಂತೆ ಮೂಲಸೌಲಭ್ಯ– ಸೇವೆಗಳನ್ನು ಒದಗಿಸುವುದು ಸರ್ಕಾರದ ಹೊಣೆಗಾರಿಕೆ. ನಿನ್ನೆಯಷ್ಟೇ ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿಯಲ್ಲಿ ಬೆಂಗಳೂರು ಲೈಫ್ ಸೈನ್ಸಸ್ ಪಾರ್ಕ್‌ನ ಭೂಮಿ ಪೂಜಾ ಕಾರ್ಯಕ್ರಮ ನೆರವೇರಿಸಿದ್ದು, ಇದು ಬೆಂಗಳೂರನ್ನು ಜಾಗತಿಕ ಜೈವಿಕ ತಂತ್ರಜ್ಞಾನದ ಹಬ್ ಆಗಿ ಸ್ಥಾಪಿಸುವಲ್ಲಿ ಸಹಕಾರಿಯಾಗಲಿದೆ ಎಂದು ಹೇಳಿದರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಹೊಸದಾಗಿ ಸೇರ್ಪಡೆಯಾಗಿರುವ **110** ಗ್ರಾಮಗಳ ಕುಡಿಯುವ ನೀರಿನ ಯೋಜನೆ ಮತ್ತು ಲೆಕ್ಕಕ್ಕೆ ಸಿಗದ ನೀರಿನ ನಿಯಂತ್ರಣ ಯೋಜನೆಯನ್ನು ರೂ. **1,500** ಕೋಟಿ ವೆಚ್ಚದಲ್ಲಿ ಕೈಗೆತ್ತಿಕೊಳ್ಳಲಾಗಿದೆ. ಸುಗಮ ಸಂಚಾರ ವ್ಯವಸ್ಥೆಯ ಅವಿಭಾಜ್ಯ ಅಂಗವಾದ ಉತ್ತಮ ರಸ್ತೆಗಳ ಜಾಲವನ್ನು ಸಿದ್ಧಪಡಿಸುವ ನಿಟ್ಟಿನಲ್ಲಿ ಪ್ರಮುಖ ಕಾಮಗಾರಿಗಳಿಗೆ ಚಾಲನೆ ನೀಡಲಾಗುತ್ತಿದೆ. ಸ್ಮಾರ್ಟ್‌ಸಿಟಿ ಯೋಜನೆಯಡಿ **456.5** ಕೋಟಿ ರೂ. ವೆಚ್ಚದಲ್ಲಿ ನಗರದ ಹೃದಯ ಭಾಗದ ರಸ್ತೆಗಳನ್ನು ಪುನರುಜ್ಜೀವನಗೊಳಿಸಲಾಗುತ್ತಿದೆ. ಒಟ್ಟು **28.56** ಕಿ.ಮೀ. ಉದ್ದದ **36** ರಸ್ತೆಗಳನ್ನು ಸ್ಮಾರ್ಟ್ ರಸ್ತೆಗಳನ್ನಾಗಿ ಅಭಿವೃದ್ಧಿ ಮಾಡಲಾಗುತ್ತಿದೆ. ಸದ್ಯ ನಗರದಲ್ಲಿ ಹೆಚ್ಚುತ್ತಿರುವ ಹರಡುತ್ತಿರುವ ಕೋವಿಡ್–**19** ಸೋಂಕನ್ನು ಹೆಚ್ಚು ಪರಿಣಾಮಕಾರಿಯಾಗಿ ನಿಯಂತ್ರಿಸುವುದರ ಜೊತೆಗೆ ಮೂಲಸೌಲಭ್ಯ–ಸೇವೆಗಳನ್ನು ಒದಗಿಸುವ ಅಭಿವೃದ್ಧಿ ಕಾಮಗಾರಿಗಳನ್ನು ಆದ್ಯತೆ ಮೇರೆಗೆ ಪಡೆದು ಪೂರ್ಣಗೊಳಿಸಲಾಗುವುದು. ಹಾಗೆಯೇ ಇಂದು ಚಾಲನೆ

ನೀಡಿರುವ ಈ ಕಾಮಗಾರಿಗಳು ನಿಗದಿತ ವೇಳೆಯಲ್ಲಿ ಪೂರ್ಣಗೊಂಡು ಬೆಂಗಳೂರಿನ ವಾಹನ ದಟ್ಟಣೆಯನ್ನು ನಮ್ಮ ಮೆಟ್ರೋ ನಿವಾರಿಸಲಿ ಎಂದು ಆಶಿಸಿದರು.

## ಪ್ರಮಾಣ ವಚನ ಸ್ವೀಕಾರ

**ಬೆಂಗಳೂರು, ಜುಲೈ 30 (ಕರ್ನಾಟಕ ವಾರ್ತೆ)**

ರಾಜ್ಯ ವಿಧಾನ ಪರಿಷತ್ತಿಗೆ ನೂತನವಾಗಿ ನಾಮ ನಿರ್ದೇಶನಗೊಂಡ ಸದಸ್ಯರು ಗುರುವಾರ ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪ್ರಮಾಣ ವಚನ ಸ್ವೀಕರಿಸಿದರು.

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಇಂದು ನಡೆದ ಕಾರ್ಯಕ್ರಮದಲ್ಲಿ ಸಿ.ಪಿ. ಯೋಗೇಶ್ವರ್ , ಅಡಗೂರು ಹೆಚ್.ವಿಶ್ವನಾಥ್, ಶಾಂತಾರಾಮ್ ಬುಡ್ನ ಸಿದ್ದಿ, ಡಾ. ತಳವಾರ್ ಸಾಬಣ್ಣ ಅವರು ಭಗವಂತನ ಹೆಸರಿನಲ್ಲಿ ಹಾಗೂ ಶ್ರೀಮತಿ ಭಾರತಿ ಶೆಟ್ಟಿ ಅವರು ಭಾರತಮಾತೆಯ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದರು.

ವಿಧಾನ ಪರಿಷತ್ತಿನ ಸಭಾಪತಿಗಳಾದ ಕೆ. ಪ್ರತಾಪ ಚಂದ್ರ ಶೆಟ್ಟಿ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಪ್ರವಾಸೋದ್ಯಮ ಸಚಿವ ಸಿ.ಟಿ. ರವಿ, ವಿಧಾನ ಪರಿಷತ್‌ನ ಸದಸ್ಯರಾದ ರವಿಕುಮಾರ್, ಮಾಜಿ ಮಂತ್ರಿಗಳಾದ ರಾಮಚಂದ್ರೇಗೌಡ, ಸರ್ಕಾರದ ಮುಖ್ಯ ಸಚೇತಕರಾದ ಮಹಂತೇಶ ಕವಠಗಿ ಮಠ ಉಪಸ್ಥಿತರಿದ್ದರು. ವಿಧಾನ ಪರಿಷತ್ತಿನ ಕಾರ್ಯದರ್ಶಿಗಳಾದ ಶ್ರೀಮತಿ ಮಹಾಲಕ್ಷ್ಮಿ ಅವರು ಪ್ರಮಾಣ ವಚನದ ಕಾರ್ಯಕ್ರಮ ನಡೆಸಿಕೊಟ್ಟರು.

## "ಕನ್ನಡ ಕೃಷಿ ಪುಸ್ತಕ ಪ್ರಶಸ್ತಿ-2019"ಕ್ಕೆ ಅರ್ಜಿ ಆಹ್ವಾನ -ಅವಧಿ ವಿಸ್ತರಣೆ

**ಬೆಂಗಳೂರು, ಜುಲೈ 30 (ಕರ್ನಾಟಕ ವಾರ್ತೆ)**

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದಿಂದ ಕನ್ನಡದಲ್ಲಿ ಪ್ರಕಟವಾಗಿರುವ ಕೃಷಿ ಸಂಬಂಧಿತ ಕನ್ನಡ ಪುಸ್ತಕಗಳಿಗೆ **'ಕನ್ನಡ ಕೃಷಿ ಪುಸ್ತಕ ಪ್ರಶಸ್ತಿ-2019'** ನೀಡುವ ಸಲುವಾಗಿ ಲೇಖಕರಿಂದ ಪುಸ್ತಕಗಳನ್ನು ಪ್ರಶಸ್ತಿಗಾಗಿ ಅರ್ಜಿಗಳನ್ನು ಆಹ್ವಾನಿಸಿ ಜುಲೈ, 31ರೊಳಗೆ ತಲುಪುವಂತೆ ಕಳುಹಿಸಬೇಕೆಂದು ಕೋರಲಾಗಿತ್ತು. ಈಗ **ದಿನಾಂಕವನ್ನು 15-08-2020 ರವರೆಗೆ ವಿಸ್ತರಿಸಲಾಗಿದೆ.** ಪ್ರಶಸ್ತಿಯು ರೂ.10,000/- ನಗದು ಮತ್ತು ಪ್ರಶಸ್ತಿ ಫಲಕವನ್ನು ಒಳಗೊಂಡಿರುತ್ತದೆ. 2019ರ ಜನವರಿಯಿಂದ ಡಿಸೆಂಬರ್ ಒಳಗೆ ಪ್ರಕಟವಾಗಿರುವ ಪುಸ್ತಕಗಳ ತಲಾ ಮೂರು ಪ್ರತಿಗಳನ್ನು ಲೇಖಕರು ಮುಖ್ಯಸ್ಥರು, ಕನ್ನಡ ಅಧ್ಯಯನ ವಿಭಾಗ, ಕೃಷಿ ವಿಶ್ವವಿದ್ಯಾನಿಲಯ, ಜಿಕೆವಿಕೆ, ಬೆಂಗಳೂರು-560 065ಕ್ಕೆ ಸಲ್ಲಿಸುವುದು. ಅರ್ಜಿ ನಮೂನೆಯನ್ನು uasbangalore.edu.in

ಅಂತರ್ ಜಾಲದಿಂದ ಪಡೆಯಬಹುದು. ಹೆಚ್ಚಿನ ವಿವರಗಳಿಗೆ kannada.uas@gmail.com ಇ–ಮೇಲ್ ವಿಳಾಸಕ್ಕೆ ಅಥವಾ ದೂರವಾಣಿ ಸಂಖ್ಯೆ 080–23330239ಕ್ಕೆ ಸಂಪರ್ಕಿಸಲು ಪ್ರಕಟಣೆ ತಿಳಿಸಿದೆ.

# Commencement of Tunneling work between Cantonment and Shivajinagar Metro stations

Bengaluru, July 30 (Karnataka Information)

The underground section of the Phase-2 of the project consists of 13.9 kms Underground Corridor from South Ramp near Jayanagar Fire station to North Ramp near Nagawara underground station, consisting of 12 underground stations and 10.37 kms of Twin /tunnels. The construction of the entire underground work, has been divided into Four packages namely RT01, RT02, RT03 and RT04.

Under RT 03 Package the work involves, Tunneling from Cantonment Sation to Shivajinagar station and from Cantonment station upto Launching/Retrieval Shaft at shadhi Mahal near Tannery Road Undergrounds station for a length of 2.88 kms with Two underground stations viz., Cantonment and Pottery Town. The contractor M/s Larsen and Toubro Ltd has procured Two Slurry based Tunnel Boring Machines (TBM) to complete the above Tunneling works. TBMs have been procured from M/s Crchi and consignments reached Chennai Port by Sea Route and were transported to Bengaluru in the month of March 2020. The Names of the Two TBMs are Urja and Vindhya.

Chief Minister, has set in motion one Tunnel Boring Machine (Urja) today. The TBM named Urja will be Tunneling (North bound Tunnel) between Cantonment and Shivajinagar stations. The expected Geology in this Tunnel Section is about 250m in Hard Rock, 350m in Mixed Ground conditions and about 255m in Soil. The Second TBM (Vindya) will be Commissioned shortly after required advancement of First TBM (Urja)

The Phase 2 extension Lines, R4 from Yelachenahalli to Anjanapura is likely to be commissioned in November 2020, Extension Line R2 from Mysore Road to Kengeri in February 2021, extension Line R1 from Baiyappanahalli to Whitefield in

June 2020, Extension Line R3 from Nagasandra to BIEC in January 2022, New Line R5 from RV Road to Bommasandra in March 2022 and New Line R6 from Kalena Agrahara to Nagwara in June 2024 says official press release.

## ವೆಬ್‌ಸೈಟ್ ತಾತ್ಕಾಲಿಕವಾಗಿ ತಡೆ

**ಬೆಂಗಳೂರು, ಜುಲೈ 30 (ಕರ್ನಾಟಕ ವಾರ್ತೆ)**

ಕೋವಿಡ್ –19 ರ ಕಾರಣದಿಂದ 2020–21 ನೇ ಸಾಲಿನ ಶೈಕ್ಷಣಿಕ ವರ್ಷದ ಶಾಲಾ ಪ್ರಾರಂಭ ವಿಳಂಬವಾಗುತ್ತಿದೆ. ಈ ಹಿನ್ನೆಲೆಯಲ್ಲಿ 1 ರಿಮದ 10 ನೇ ತರಗತಿಯ ಎಲ್ಲಾ ವಿಷಯಗಳ ಪಠ್ಯಾಂಶಗಳನ್ನು **ktbs.kar.nic.in** ಇಲಾಖಾ ನಿರ್ದೇಶನದಂತೆ 120 ಶಾಲಾ ಕೆಲಸದ ದಿನಗಳಿಗೆ ಕಡಿತಗೊಳಿಸಿ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿತ್ತು. ಆದರೆ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರ ಸೂಚನೆಯಂತೆ ಸದರಿ ಪ್ರಕಟಣೆಯನ್ನು ತಾತ್ಕಾಲಿಕವಾಗಿ ತಡೆಹಿಡಿಯಲಾಗಿದೆ ಎಂದು ಸಾರ್ವಜನಿಕ ಶಿಕ್ಷಣ ಇಲಾಖೆಯ ಪ್ರಕಟಣೆ ತಿಳಿಸಿದೆ.

## ಕಂಟೋನ್ಮೆಂಟ್ ಮತ್ತು ಶಿವಾಜಿನಗರ ಮೆಟ್ರೋ ನಿಲ್ದಾಣಗಳ ನಡುವೆ ಸುರಂಗ ಮಾರ್ಗದ ಪ್ರಾರಂಭ

**ಬೆಂಗಳೂರು, 30 ನೇ ಜುಲೈ (ಕರ್ನಾಟಕ ವಾರ್ತೆ):**

ಯೋಜನೆಯ ಹಂತ–2 ಸುರಂಗ ಮಾರ್ಗವು ಜಯನಗರ ಅಗ್ನಿಶಾಮಕ ಕೇಂದ್ರದ ಸಮೀಪವಿರುವ ದಕ್ಷಿಣ ರಾಂಪ್‌ನಿಂದ ನಾಗವಾರ ನಿಲ್ದಾಣದ ಬಳಿಯ ಉತ್ತರ ರಾಂಪ್‌ರವರೆಗೆ 13.9 ಕಿ.ಮೀ ಸುರಂಗ ಮಾರ್ಗದ ಕಾರಿಡಾರ್ ಅನ್ನು ಒಳಗೊಂಡಿದೆ. ಇದರಲ್ಲಿ 12 ನೆಲದಡಿಯ ನಿಲ್ದಾಣಗಳು ಹಾಗೂ 10.37 ಕಿ.ಮೀ ಅವಳಿ ಸುರಂಗ ಮಾರ್ಗಗಳನ್ನು ಹೊಂದಿರುತ್ತದೆ. ಸಂಪೂರ್ಣ ಸುರಂಗ ಮಾರ್ಗದ ನಿರ್ಮಾಣ ಕೆಲಸವನ್ನು ನಾಲ್ಕು ಪ್ಯಾಕೇಜ್‌ಗಳಾಗಿ ವಿಂಗಡಿಸಲಾಗಿದೆ, ಅವುಗಳೆಂದರೆ ಆರ್‌ಟಿ 01, ಆರ್‌ಟಿ 02, ಆರ್‌ಟಿ 03 ಮತ್ತು ಆರ್‌ಟಿ 04.

ಆರ್‌ಟಿ03 ಪ್ಯಾಕೇಜ್‌ನಲ್ಲಿ, ಕಂಟೋನ್ಮೆಂಟ್ ನಿಲ್ದಾಣದಿಂದ ಶಿವಾಜಿನಗರ ನಿಲ್ದಾಣಕ್ಕೆ ಮತ್ತು ಕಂಟೋನ್ಮೆಂಟ್ ನಿಲ್ದಾಣದಿಂದ ಟ್ಯಾನರಿ ರಸ್ತೆಯಲ್ಲಿರುವ ಶಾದಿ ಮಹಲ್ ಶಾಫ್ಟ್‌ವರೆಗೆ 2.88 ಕಿ.ಮೀ ಉದ್ದದ ಸುರಂಗ ಮಾರ್ಗ ಹಾಗೂ ಕಂಟೋನ್ಮೆಂಟ್ ಮತ್ತು ಪಾಟರಿ ಟೌನ್ ನೆಲದಡಿ ನಿಲ್ದಾಣಗಳ ಕಾಮಗಾರಿ ಒಳಗೊಂಡಿರುತ್ತದೆ. ಮೇಲಿನ ಸುರಂಗ ಮಾರ್ಗದ ಕೆಲಸಗಳನ್ನು ಪೂರ್ಣಗೊಳಿಸಲು ಗುತ್ತಿಗೆದಾರರಾದ ಮೆ. ಲಾರ್ಸೆನ್ ಮತ್ತು ಟೌಬ್ರೊ ಲಿಮಿಟೆಡ್ ಇವರಿಗೆ ವಹಿಸಿದ್ದು ಗುತ್ತಿಗೆದಾರರು ಎರಡು ಕೊಳೆ ಆಧಾರಿತ ಸುರಂಗ ಕೊರೆಯುವ ಯಂತ್ರಗಳನ್ನು (ಟಿಬಿಎಂ) ವ್ಯವಸ್ಥೆಗೊಳಿಸಿದ್ದಾರೆ. ಮೆಸರ್ಸ್ ಸಿಆರ್‌ಸಿಐ ಯಿಂದ ಖರೀದಿಸಿದ ಟಿಬಿಎಂಗಳು ಸಮುದ್ರ ಮಾರ್ಗದ

ಮೂಲಕ ಚೆನ್ನೈ ಬಂದರಿಗೆ ತಲುಪಿ ನಂತರ ಮಾರ್ಚ್ 2020 ರ ವೇಳೆಗೆ ಬೆಂಗಳೂರಿಗೆ ತಲುಪಿರುತ್ತವೆ. ಈ ಎರಡು ಟಿಬಿಎಂಗಳಿಗೆ 'ಉರ್ಜಾ' ಮತ್ತು 'ವಿಂಧ್ಯ' ಎಂದು ಹೆಸರಿಡಲಾಗಿದೆ.

ಕರ್ನಾಟಕದ ಸರ್ಕಾರದ ಮುಖ್ಯಮಂತ್ರಿಗಳು ಇಂದು ದಿನಾಂಕ 30/07/2020 ರಂದು ಒಂದು ಸುರಂಗ ಕೊರೆಯುವ ಯಂತ್ರಕ್ಕೆ (ಉರ್ಜಾ) ಚಾಲನೆ ನೀಡಿದ್ದಾರೆ. ಉರ್ಜಾ ಹೆಸರಿನ ಟಿಬಿಎಂ ಕಂಟೋನ್ಮೆಂಟ್ ಮತ್ತು ಶಿವಾಜಿನಗರ ನಿಲ್ದಾಣಗಳ ನಡುವಿನ ಸುರಂಗ ಮಾರ್ಗ (ಉತ್ತರಕ್ಕೆ ಸುರಂಗ) ಕೊರೆಯಲಿದೆ. ಈ ಸುರಂಗ ಮಾರ್ಗವು ಭೂಸಮೀಕ್ಷೆಯ ಅಂದಾಜಿನ ಪ್ರಕಾರ ಸುಮಾರು 250 ಮೀ ಗಟ್ಟಿಬಂಡೆ, ಸುಮಾರು 350 ಮೀ ಮಿಶ್ರ ಭೂಮಿ ಮತ್ತು ಸುಮಾರು 255 ಮೀ ಮಣ್ಣಿನಿಂದ ಕೂಡಿರತ್ತದೆ. ಮೊದಲ ಟಿಬಿಎಂ(ಉರ್ಜಾ) ಅಗತ್ಯವಾದ ಅಂತರ ಗತಿಸಿದ ನಂತರ ಎರಡನೇ ಟಿಬಿಎಂ(ವಿಂಧ್ಯ) ಕಾರ್ಯಾರಂಭಗೊಳ್ಳುತ್ತದೆ.

2ನೇ ಹಂತದ ವಿಸ್ತರಣಾ ಮಾರ್ಗಗಳಾದ ರೀಚ್–4 ಯೆಲಚೇನಹಳ್ಳಿಯಿಂದ ಅಂಜನಾಪುರದವರೆಗೆ ನವೆಂಬರ್ 2020ರಲ್ಲಿ, ರೀಚ್–2 ಮೈಸೂರು ರಸ್ತೆಯಿಂದ ಕೆಂಗೇರಿಯವರೆಗೆ ಫೆಬ್ರವರಿ 2021ರಲ್ಲಿ,ರೀಚ್–3 ನಾಗಸಂದ್ರದಿಂದ ಬಿಐಇಸಿ ವರೆಗೆ ಜನವರಿ 2022ರಲ್ಲಿ, ರೀಚ್–1 ಬೈಯಪ್ಪನಹಳ್ಳಿಯಿಂದ ವೈಟ್‌ಫೀಲ್ಡ್ ವರೆಗೆ ಜೂನ್ 2022 ರಲ್ಲಿ ಹಾಗೂ ಹೊಸಮಾರ್ಗಗಳಾದ ರೀಚ್–5 ಆರ್.ವಿ.ರಸ್ತೆಯಿಂದ ಬೊಮ್ಮಸಂದ್ರಕ್ಕೆ ಮಾರ್ಚ್ 2022ರಲ್ಲಿ ಮತ್ತು ರೀಚ್–6 ಕಾಳೇನಾ ಅಗ್ರಹಾರದಿಮದ ನಾಗವಾರಕ್ಕೆ ಜೂನ್ 2024 ರಲ್ಲಿ ಕಾರ್ಯಚರಣೆಗೊಳಿಸುವ ಯೋಜನೆ ಇದೆ.

## Free Tele Counseling for Children

Bengaluru, July 30 (Karnataka Information)

Integrated Child Protection Scheme is starting free "Tele Counseling" Facility through a Toll-Free number 18004252244. UNICEF is supporting the finances of the Man-Power required for this free " "Tele-Counseling" Facility. Free "Tele-Counseling" Facility is contemplated to attend the consceling needs of all the children of Karnataka in need of the same, means any child of Karnataka who wants to get counseling services either the child or the parents of the child can call 18004252244 and get free counseling facility. Free "Tele-Counselling" Facility works through 2 counselors (One in 8 am to 2 pm shift and the other in 2 pm to 8 pm shift) who primarily receives the call of the child and then connects the call to the concerned counselor depending on the need of the child's counseling specific requirements.

To give counseling to the children for the call received on toll free no already 148 counselors and Social workers working with Integrated Child Protection Scheme across the State have been given first round of basic training. In the coming days based on practical experience more relevant training will be conducted to these counselors across the State so that their capacities are enhanced to serve the children in need of psychological support says Official Press Release

# ಮಕ್ಕಳಿಗೆ ಉಚಿತ ಟೆಲಿ–ಕೌನ್ಸಿಲಿಂಗ್

ಬೆಂಗಳೂರು, 30 ನೇ ಜುಲೈ (ಕರ್ನಾಟಕ ವಾರ್ತೆ):

ಸಮಗ್ರ ಮಕ್ಕಳ ರಕ್ಷಣಾ ಯೋಜನೆ ನಿರ್ಲಕ್ಷತೆಗೊಳಗಾದ, ಪರಿತ್ಯಜಿಸಲ್ಪಟ್ಟ, ದೌರ್ಜನ್ಯಕ್ಕೆ, ಶೋಷಣೆಗೆ ಒಳಗಾದ ಮತ್ತು ಕುಟುಂಬದಿಂದ ಬೇರ್ಪಟ್ಟ ಮಕ್ಕಳು ದುರ್ಬಲ ಸ್ಥಿತಿಗೆ ತಲುಪದಿರುವಂತೆ ತಡೆಯಲು ಹಾಗೂ ಇಂತಹ ಪ್ರಕರಣಗಳನ್ನು ಕಡಿಮೆ ಮಾಡಲು ಹಾಗೂ ಸಂಕಷ್ಟದಲ್ಲಿರುವ ಮಕ್ಕಳ ಪರಿಸ್ಥಿತಿಯನ್ನು ಉತ್ತಮಪಡಿಸುವ ಉದ್ದೇಶವನ್ನು ಹೊಂದಿರುವ ಕೇಂದ್ರದ ಯೋಜನೆಯಾಗಿರುತ್ತದೆ.

ಸಮಗ್ರ ಮಕ್ಕಳ ರಕ್ಷಣಾ ಯೋಜನೆಯು ಮಕ್ಕಳಿಗಾಗಿ ಉಚಿತ ದೂರವಾಣಿ ಸಮಾಲೋಚನೆ ನೀಡಲು ಟೋಲ್–ಫ್ರೀ ನಂ: 18004252244 ಅನ್ನು ಪ್ರಾರಂಭಿಸುತ್ತಿದೆ. ಉಚಿತ "ಟೆಲಿ–ಆಪ್ತಸಮಾಲೋಚನೆ"ಗೆ ಅಗತ್ಯವಿರುವ ಮಾನವ ಸಂಪನ್ಮೂಲದ ಬಳಕೆಗೆ ಯೂನಿಸೆಫ್ ಹಣಕಾಸು ಸಹಾಯ ಮಾಡುತ್ತದೆ. ಕರ್ನಾಟಕದಲ್ಲಿ ಸಮಾಲೋಚನೆ ಅಗತ್ಯವಿರುವ ಎಲ್ಲಾ ಮಕ್ಕಳಿಗಾಗಿ ಉಚಿತ "ಟೆಲಿ–ಕೌನ್ಸ್‌ಲಿಂಗ್ ಸೌಲಭ್ಯವನ್ನು ನೀಡಲು ಯೋಜಿಸಲಾಗಿದೆ. ಆಪ್ತ ಸಮಾಲೋಚನೆ ಬಯಸುವ ಕರ್ನಾಟಕದಲ್ಲಿನ ಎಲ್ಲಾ ಮಕ್ಕಳು ಹಾಗೂ ಮಕ್ಕಳ ಪೋಷಕರು ಈ ಟೋಲ್ ಫ್ರೀ ಸಂಖ್ಯೆಗೆ ಕರೆ ಮಾಡುವ ಮೂಲಕ ಉಚಿತವಾಗಿ ಆಪ್ತ ಸಮಾಲೋಚನೆ ಸೌಲಭ್ಯ ಪಡೆಯಬಹುದು.

ಉಚಿತ "ಟೆಲಿ–ಆಪ್ತಸಮಾಲೋಚನೆ" ಸೌಲಭ್ಯವು ಪ್ರಮುಖವಾಗಿ 2 ಸಿಬ್ಬಂದಿಗಳನ್ನು ಹೊಂದಿದ್ದು ( ಒಬ್ಬ ಸಿಬ್ಬಂದಿ ಬೆಳಿಗ್ಗೆ 8.00 ರಿಂದ ಮಧ್ಯಾಹ್ನ 2.00 ವರೆಗೆ ಹಾಗೂ ಮಧ್ಯಾಹ್ನ 2.00 ರಿಂದ ರಾತ್ರಿ 8.00 ವರೆಗೆ) ಪಾಳಿ ಕೆಲಸ ನಿರ್ವಹಿಸುತ್ತಾರೆ. ಇವರು ಪ್ರಥಮವಾಗಿ ಮಗುವಿನ ಕರೆಗಳನ್ನು ಸ್ವೀಕರಿಸಿ ಮಗುವಿನ ನಿರ್ಧಿಷ್ಟವಾದ ಸಮಾಲೋಚನೆಯ ಅವಶ್ಯಕತೆಯನ್ನು ಆಧರಿಸಿ ಸಂಬಂಧಪಟ್ಟ ಸಮಾಲೋಚಕರಿಗೆ ಸಂಪರ್ಕ ಕಲ್ಪಿಸುತ್ತಾರೆ.

ಟೋಲ್–ಫ್ರೀ ಸಂಖ್ಯೆ 18004252244ಕ್ಕೆ ಬಂದ ಕರೆಗಳಿಗೆ ಅವಶ್ಯಕ ಆಪ್ತ ಸಮಾಲೋಚನೆ ಒದಗಿಸಲು ರಾಜ್ಯಾದ್ಯಂತ ಸಮಗ್ರ ಮಕ್ಕಳ ರಕ್ಷಣಾ ಯೋಜನೆಯಲ್ಲಿ ಕಾರ್ಯನಿರ್ವಹಿಸುತ್ತಿರುವ 148 ಸಮಾಲೋಚಕರಿಗೆ ಹಾಗೂ ಸಮಾಜ ಕಾರ್ಯಕರ್ತರಿಗೆ ಪ್ರಥಮ ಹಂತದ ತರಬೇತಿಯನ್ನು ನೀಡಲಾಗಿದೆ. ಮುಂದಿನ ದಿನಗಳಲ್ಲಿ ಅನುಭವದ ಆಧಾರದ ಮೇಲೆ ಮನೋಶಾಸ್ತ್ರ ಬೆಂಬಲದ ಅವಶ್ಯಕತೆ ಇರುವ ಮಕ್ಕಳಿಗೆ ಸೇವೆ ಸಲ್ಲಿಸಲು ಹೆಚ್ಚಿನ ತರಬೇತಿಯನ್ನು ಎಲ್ಲಾ ಸಮಾಲೋಚಕರಿಗೆ ಒದಗಿಸಿ ಮಕ್ಕಳ ಸಾಮರ್ಥ್ಯ ಅಭಿವೃದ್ಧಿ ಮಾಡಲಾಗುವುದು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.